Sri H. SIDDAVEERAPPA.—I entirely agree with the Hon'ble Member.

Sri A. BHEEMAPPA NAIK.— In view of the feeling of the Government, will they give all necessary encouragement to that co-operative farming?

Sri H. SIDDAVEERAPPA.—Yes.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).— ಸ್ವಾಮಿ, ತಾವೀಗ ಈ ಕೋ-ಆಪರೇಟೀವ್ ಫಾರಂಗಳಿಗೆ ಕೊಟ್ಟಿರತಕ್ಕ ಅನುಕೂಲಗಳಾವುವು?

Sri H. SIDDAVEERAPPA.—I do not think that question arises out of this.

ಶ್ರೀ ಬಿ. ಹುಚ್ಚೇಗೌಡರು.—ಈಗ ಈ ಜಮೀನನ್ನು ತಾವು ಯಾರುಯಾರಿಗೆ ಹಂಚಿಕೆಮಾಡಿದ್ದೀರೋ ಅವರೆಲ್ಲರೂ ಇದನ್ನು ಏಕೀಭವಿಸಿ ಮಾಡುತ್ತಾರೋ ಅಥವಾ ಪ್ರತ್ಯೇಕಪ್ರತ್ಯೇಕವಾಗಿ ಮಾಡುತ್ತಾರೋ?

ಶ್ರೀ ಎಚ್. ಸಿದ್ದವೀರಪ್ಪನವರು.—ಒಟ್ಟಾಗಿ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಆ ಸ್ಥಳದಲ್ಲಿ ಈಗ 46, 47, 52 ಕುಂಟುಂಬಗಳಿರುತ್ತವೆಂದು ಹೇಳಿದ್ದೀರಿ. ಇವರೇನು ಅಲ್ಲಿ ಹೊಸದಾಗಿ ಮನೆಗಳನ್ನು ಕಟ್ಟಿಕೊಂಡಿರತಕ್ಕಮುಗಳೋ ಅಥವಾ ಮೊದಲಿನಿಂದಲೂ ಅಲ್ಲೇ ವಾಸಮಾಡಿಕೊಂಡಿದ್ದವರೋ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೊಸದಾಗಿ ಮನೆಗಳನ್ನು ಕಟ್ಟಿಕೊಂಡು ಇರತಕ್ಕವರು.

ಶ್ರೀ ಡಿ. ದೇವರಾಜ ಅರಸಿನವರು (ಹುಣಸೂರು).— ಹೀಗೆ ಹಂಚಲಾಗುವ ಜಮೀನುಗಳ ಬಗ್ಗೆ ಒಂದು ಪಟ್ಟಿಯನ್ನೇನಾದರೂ ಇಡಲಾಗಿದೆಯೇ? ಯಾರು ಆ ಪಟ್ಟಿ ಇಡತಕ್ಕವರು?

ಶ್ರೀ ಎಚ್. ಸಿದ್ದವೀರಪ್ಪನವರು.—ಕೋ-ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್ ಅವರು ಒಂದು ಪಟ್ಟಿಯನ್ನು ತಯಾರಿಸಿ ಇಡುತ್ತಾರೆ.

Sri D. DEVARAJA URS.—I am referring to this particular Co-operative Farming Society.

Sri H. SIDDAVEERAPPA.—The Sub-Division Officer of Davangere Sub-Division has overall control over this.

ಶ್ರೀ ಡಿ. ದೇವರಾಜಅರಸಿನವರು.—ಇದಕ್ಕೆ ಬೋರ್ಡ್ ಆಫ್ ಡೈರೆಕ್ಟರ್ಸ್ ಎಂಬುದಾಗಿ ಏನಾದರೂ ಒಂದು ಮಂಡಳಿ ಇದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೌದು. ಇದೆ.

ಶ್ರೀ ಡಿ. ದೇವರಾಜಅರಸಿನವರು.—ಈ ಬೋರ್ಡ್ ಆಫ್ ಡೈರೆಕ್ಟರಿಗೆ ಮಾತ್ರ ಈ ಜಮೀನನ್ನು ಹಂಚುವ ಅಧಿಕಾರವಿರುತ್ತದಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

Alleged Hiring of Tractor from Government.

Q.—**287. Sri S. M. MARIAPPA** (Periyapatna).—Will the Government be pleased to state :—

(*a*) whether Sri H. M. Channabasappa of Periyapatna Taluk has bought a tractor from Government on 'Hire-Purchase System';

(*b*) how much he is due to Government in this behalf;

(*c*) whether he has paid any instalments;

(*d*) what are the steps taken to recover the money due?

A.—**Sri H. SIDDAVEERAPPA** (Minister for Home Affairs and Agriculture).—

(*a*) No.

(*b*), (c) and (*d*) Does not arise.

ಶ್ರೀ ಎಸ್. ಎಂ. ಮರಿಯಪ್ಪನವರು —ತಾವು ಉತ್ತರದಲ್ಲಿ ಟ್ರಾಕ್ಟರುಗಳನ್ನು ಹೈರ್-ಪರ್ಚೇಸ್ ಸಿಸ್ಟಂ ಪ್ರಕಾರ ಕೊಟ್ಟಿಲ್ಲವೆಂದು ತಿಳಿಸಿದ್ದೀರಿ. ಹಾಗಾದರೆ ಮತ್ತೆ ಯಾವ ರೂಪದಲ್ಲಿ ಅವರಿಗೆ ಅದನ್ನು ಕೊಡಲಾಗಿದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಶ್ರೀ ಎಚ್.ಎಂ. ಚನ್ನಬಸಪ್ಪನವರಿಗೆ ಯಾವ ರೂಪದಲ್ಲೂ ಟ್ರಾಕ್ಟರನ್ನು ಕೊಟ್ಟಿಲ್ಲ.

Bulldozer charges due by Sri H. M. Channabasappa

Q.—288. **Sri S. M. MARIAPPA** (Periyapatna).—Will the Government be pleased to state :—

(*a*) when Sri H. M. Channabasappa of Periyapatna Taluk applied for bulldozer to level up his lands and when he got it actually to his lands;

(*b*) since how long the bulldozer is with him;

(*c*) (i) the total acreage worked by the bulldozer and (ii) the number of hours it has worked;

(*d*) (i) the total amount Sri H. M. Channabasappa has paid so far and (ii) the amount he has still to pay for bulldozer charges;

(*e*) the steps taken to recover the amount?

A.—**Sri H. SIDDAVEERAPPA** (Minister for Home Affairs and Agriculture).—

(*a*) On 3rd May 1951.

(*b*) From 4th May 1951 to 12th May 1952.

(*c*) (i) 100 acres.
(ii) 1,221 hours.

(*d*) (i) Rs. 2,000.
(ii) Rs. 7,768.

(*e*) He has been pressed to pay up the balance early.

ಶ್ರೀ ಎಸ್. ಎಂ. ಮರಿಯಪ್ಪನವರು.—ನನ್ನ (ಎ) ಪ್ರಶ್ನೆಗೆ ಉತ್ತರದಲ್ಲಿ 3-5-51 ರಲ್ಲಿ ಅರ್ಜಿ ಬಂದಿತೆಂದೂ, 4-5-50 ರಿಂದ 12-5-1952 ರ ವರೆಗೆ ಆ ಬುಲ್‌ಡೋಜರ್ ಅವರ ಬಳಿಯಿತ್ತೆಂದೂ ತಿಳಿಸಲಾಗಿದೆ. ಅಂದರೆ ಅರ್ಜಿ ಬಂದ ಮೇಲೆ ಬುಲ್‌ಡೋಜರ್ ಕೊಟ್ಟರೋ ಅಥವಾ ಬುಲ್‌ಡೋಜರ್ ಕೊಟ್ಟ ಮೇಲೆ ಅರ್ಜಿ ಬಂತೋ?

Mr. SPEAKER.—It need not be answered. The answer is so clear.

ಶ್ರೀ ಎಸ್. ಎಂ. ಮರಿಯಪ್ಪನವರು.—ಹಾಗಾದರೆ ಇದನ್ನು ಅವರ ಅರ್ಜಿ ಮೇಲೆ ಆರ್ಡರ್ ಮಾಡಲಾಯಿತೋ?

ಶ್ರೀ ಎಚ್. ಸಿದ್ದವೀರಪ್ಪನವರು.—ಕಾನೂನು ಪ್ರಕಾರ ಏನೇನು ಮಾಡಬೇಕೊ ಹಾಗೆ ಮತ್ತು ಆ ರೀತಿ ಅವುಗಳೆಲ್ಲವನ್ನೂ ಮಾಡಲಾಗಿದೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಯಾವ ರೀತಿ ಮುಚ್ಚಳಿಕೆ ಬರೆಸಿಕೊಂಡು ಕೊಟ್ಟಿದ್ದೀರಿ?

Mr. SPEAKER.—That need not be answered.

ಶ್ರೀ ಎಸ್. ಎಂ. ಮರಿಯಪ್ಪನವರು.—ಈ ಬುಲ್‌ಡೋಜರ್‌ಗೆ ಒಂದು ಘಂಟೆಗೆ ಎಷ್ಟು ಕೊಡಬೇಕು?

ಶ್ರೀ ಎಚ್. ಸಿದ್ದವೀರಪ್ಪನವರು.—ಗಂಟೆ ಲೆಕ್ಕದ ಪ್ರಕಾರ ಆದರೆ ಒಂದು ಗಂಟೆಗೆ 9 ರೂಪಾಯಿಗಳು, ಎಕರೆ ಪ್ರಕಾರ ಆದರೆ 100 ರೂ. ಗಳ ದರ ಒಂದು, 150 ರೂ. ಗಳ ದರ ಒಂದು, ಮತ್ತು 250 ರೂ. ಗಳ ದರ ಒಂದು ಹೀಗೆಲ್ಲಾ ದರಗಳು ಇವೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಇವರಿಗೆ ಯಾವ ಲೆಕ್ಕದ ಪ್ರಕಾರ ಕೊಟ್ಟಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪನವರು.—ಗಂಟೆ ಲೆಕ್ಕದ ಪ್ರಕಾರ ಅವರಿಗೆ ಕೊಡಲಾಗಿತ್ತು.

ಶ್ರೀ ಎಸ್. ಎಂ. ಮರಿಯಪ್ಪನವರು.—ಒಬ್ಬರೇ ಹೀಗೆ ಒಂದು ವರ್ಷಕಾಲ ಬುಲ್‌ಡೋಜರ್ ಇಟ್ಟು ಕೊಳ್ಳುವ ಅವಕಾಶವಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಆ ಪ್ರದೇಶದಲ್ಲರ ತಕ್ಕ ಇನ್ನೂ ಅನೇಕರಿಗೆ ಒಟ್ಟಾಗಿ ಸೇರಿಸಿ ಅವರಲ್ಲಿ ಇಡಲಾಗಿತ್ತು. ಇದರ ಬಗ್ಗೆ ಬೇಕಾದಷ್ಟು ನಿಯಮಗಳಿವೆ. ಆದರೆ ಯಾವ ನಿಯಮವನ್ನೂ ಉಲ್ಲಂಘನೆ ಮಾಡಿಲ್ಲ.

ಶ್ರೀ ಎಸ್. ಎಂ. ಮರಿಯಪ್ಪನವರು.—ಇದನ್ನು ಒಬ್ಬರ ಸೌಕರ್ಯಕ್ಕಾಗಿ ತರಿಸಲಾಗಿತ್ತೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಅಲ್ಲ.

ಶ್ರೀ ಎಸ್. ಎಂ. ಮರಿಯಪ್ಪನವರು.—ನೂರಾರು ಜನ ಅರ್ಜಿ ಬರೆದು ಕೊಂಡರೂ, ಅವರಿಗೆ ಈ ಬುಲ್‌ಡೋಜರ್ ಸಿಕ್ಕುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ.

ಶ್ರೀ ಎಸ್. ಎಂ. ಮರಿಯಪ್ಪನವರು.—ಉತ್ತರದಲ್ಲಿ 1,221 ಗಂಟೆ ಕೆಲಸ ಮಾಡಿದೆ ಎಂದು ಹೇಳಲಾಗಿದೆ. ಇದರಂತೇ ಎಲ್ಲರಿಗೂ ಗಂಟೆ ಲೆಕ್ಕದ ಪ್ರಕಾರವೇ ಕೊಡರಾಗುತ್ತಿದೆಯೇ?

Mr. SPEAKER.—That question need not be answered.

ಶ್ರೀ ಎಸ್. ಎಂ. ಮರಿಯಪ್ಪನವರು.—ಒಂದು ಬುಲ್‌ಡೋಜರ್ ಉಪಯೋಗ ಎಷ್ಟು ಎಕರೆಗಳಲ್ಲಿ ಕೆಲಸ ಮಾಡಬಲ್ಲದು ಎಂಬುದನ್ನು ಹೇಳುವಿರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಹಾಗೆ ಅದನ್ನು ಎಕರೆಗಳ ದಾಮಾಷಾದಲ್ಲಿ ಹೇಳಲು ಸಾಧ್ಯವಿಲ್ಲ. It depends upon each given piece of land.

ಶ್ರೀ ಎಸ್. ಎಂ. ಮರಿಯಪ್ಪನವರು.—ಶ್ರೀವಾಣಿ ಚನ್ನಬಸಪ್ಪನವರಿಗೆ ಎಷ್ಟು ಎಕರೆ ಜಮೀನಿದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಬಹಳ ಜಮೀನಿದೆ ಎಂದು ಕೇಳಿದ್ದೇನೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಒಂದು ನೂರು ಎಕರೆ ಜಮೀನಿದ್ದರೆ ಅದಕ್ಕೆ ಒಂದು ವರ್ಷ ಒಂದು ಬುಲ್‌ಡೋಜರ್ ಬಿಡಬೇಕಾಗುತ್ತದೆಯೇ?

Sri H. SIDDAVEERAPPA.—It depends upon the circumstances of each piece of land. I cannot say that. The bulldozers may be out of order at a particular period.

Sri M. LINGANNA (Nanjangud).—Have the Government any special rule by which the balance due can be recovered?

Sri H. SIDDAVEERAPPA.—Government have ample rules to recover the balances due to them.

Sri M. LINGANNA.—May I know the reason why the balance to the extent of Rs. 7,758 is still not recovered?

Sri H. SIDDAVEERAPPA.—It will be recovered in due course.

1 P.M.

ಶ್ರೀ ಡಿ. ದೇವರಾಜ ಅರಸ್‌ರವರು (ಹುಣಸೂರು)—ಬುಲ್‌ಡೋಜರನ್ನು ಶ್ರೀ ಚನ್ನಬಸಪ್ಪನವರಿಗೆ ಯಾವ ರೀತಿ ಕೊಟ್ಟಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಇತರರಿಗೆ ಕೊಟ್ಟಿರುವ ಹಾಗೆಯೇ ಕೊಟ್ಟಿದ್ದಾರೆ.

ಶ್ರೀ ಡಿ. ದೇವರಾಜ ಅರಸ್‌ರವರು.—ಹಾಗೆ ಕೊಟ್ಟಿರುವ ರೀತಿಯಲ್ಲಿ ಹಿಂದಿನ ಮಂತ್ರಿಗಳಲ್ಲಿ ಯಾರಿಗಾದರೂ ಕೊಡಲಾಗಿದೆಯೆ?

Mr. SPEAKER.—It does not arise.

ಶ್ರೀ ಡಿ. ದೇವರಾಜ ಅರಸ್‌ರವರು.—ಅನೇಕರಿಗೆ ಕೊಟ್ಟಿದೆಯೆಂದು ಹೇಳಿದ್ದೀರಿ. ಅವರು ಎಷ್ಟು ಗಂಟೆ ಗಳ ಕಾಲ ಅದರಿಂದ ಕೆಲಸ ತೆಗೆದುಕೊಂಡಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಡಿ. ದೇವರಾಜ ಅರಸ್‌ರವರು.—ಕೊಟ್ಟಿರುವ ವರಿಗೆ ಎರಡು ಆಧಾರದ ಮೇಲೆ ಅಂದರೆ ಗಂಟೆ ಲೆಕ್ಕದ ಮೇಲೆ ಅಥವಾ ಎಕರೆಯ ಆಧಾರದ ಮೇಲೆ ಛಾರ್ಜು ಮಾಡುತ್ತೇವೆಂದು ಹೇಳಿದಿರಿ. ಹಾಗಾದರೆ ಗಂಟೆ ಲೆಕ್ಕದ ಮೇಲೆ ಹಾಗೂ ಎಕರೆ ಲೆಕ್ಕದ ಮೇಲೆ ಯಾರಾರಿಗೆ ಛಾರ್ಜುಮಾಡಲಾಗಿದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಡಿ. ದೇವರಾಜ ಅರಸ್‌ರವರು.—ಶ್ರೀ ಚನ್ನಬಸಪ್ಪನವರಿಗೆ ಯಾವ ರೀತಿ ಕೊಟ್ಟಿದೆ?

Sri H. SIDDAVEERAPPA.—In the absolute normal course.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಬುಲ್‌ಡೋಜರ್ ಕೊಡಬೇಕಾದರೆ ಅಡ್ವಾನ್ಸ್ ಇಟ್ಟುಕೊಂಡು ಕೊಡಬೇಕೆಂದು ಕಾನೂನಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—ಅಡ್ವಾನ್ಸ್ ಕೊಡದೆ ಕೊಡುವುದು ಪದ್ಧತಿಯಲ್ಲದೆಯೆ? ಅಡ್ವಾನ್ಸ್ ಹಣ ಕೊಡದಿದ್ದರೆ ಕೊಡಕೂಡದು ಎಂದು ನಿಗದಿ ಮಾಡಿರುವುದರಿಂದ, ನಮ್ಮಲ್ಲಿ ಕೆಲವು ಬುಲ್‌ಡೋಜರುಗಳು ಕೆಲಸ ವಿಲ್ಲದೆ, ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವು ಕಡೆ ಕೆಲಸವಿಲ್ಲದೇ ಇರುವುದು ಗಮನಕ್ಕೆ ಬಂದಿದೆ.

ಶ್ರೀ ಬಿ. ಹುಚ್ಚೇಗೌಡರು.—ಕೆಲಸವಿಲ್ಲದೆ ಕೆಲವು ಕಡೆ ನಿಂತಿರುವುದಕ್ಕೆ ಹಣ ಬಾಕಿಯಿರುವುದು ಕಾರಣವೋ ಅಥವಾ ಬೇರೆ ಏನಾದರೂ ಕಾರಣ ವಿದೆಯೋ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವು ಕಡೆ ಕೆಲಸವಿಲ್ಲ. ಸರಿಯಾದ ರೀತಿಯಲ್ಲಿ ಕೆಲಸ ಮಾಡಿಸಬೇಕೆಂಬ ಪ್ರಯತ್ನವಿದೆ.

State Transport Authority.

Q.—379. **Sri NARAYANAPPA** (Chintamani—Scheduled Castes).—

Will the Government be pleased to state:—

(*a*) when the Central Traffic Board was established in the State;

(*b*) the number of members in this Board;

(*c*) out of this, the number of Depressed Class members?

A.—**Sri H. SIDDAVEERAPPA** (Minister for Home Affairs and Agriculture).—

(*a*) On 8th May 1952. It is called "the State Transport Authority".

(*b*) Eleven.

(*c*) One.

ಶ್ರೀ ನಾರಾಯಣಪ್ಪನವರು.—ಸೆಂಟ್ರಲ್ ಟ್ರಾಫಿಕ್ ಬೋರ್ಡು ಸ್ಥಾಪನೆಯಾಗಿರುವುದು ಯಾವಾಗ ಎಂದು ಕೇಳಿರುವುದಕ್ಕೆ ತಾರೀಖು ಕೊಟ್ಟಿದೆ. ಅದರ ಸದಸ್ಯರೆಷ್ಟು ಎಂದು ಕೇಳಿರುವುದಕ್ಕೆ 11 ಜನ ಎಂದು ಹೇಳಿದೆ?

ಅಧ್ಯಕ್ಷರು.—ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ಓದುವುದು ಅನಾವಶ್ಯಕ, ಬೇರೆ ಪ್ರಶ್ನೆ ಏನಾದರೂ ಇದ್ದರೆ ಕೇಳಿ.

ಶ್ರೀ ಎ. ಮುನಿಯಪ್ಪನವರು (ಶಿಡ್ಲಘಟ್ಟ—ಚಿಕ್ಕಬಳ್ಳಾಪುರ—ಅನುಸೂಚಿತ ಜಾತಿಗಳು).—ಹೆಸರುಗಳನ್ನು ದಯವಿಟ್ಟು ತಿಳಿಸುತ್ತೀರಾ?

Sri A. G. RAMACHANDRA RAO.—The names have been published in the *Mysore Gazette*, dated 8th May 1952. If the Hon'ble Member wants it, I will place it on the table of the House.

ಶ್ರೀ ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲುಪೇಟೆ—ಹೆಗ್ಗಡದೇವನಕೋಟೆ).—ಹಿಂದೆ ಇದ್ದ ಟ್ರಾಫಿಕ್ ಬೋರ್ಡಿಗೆ ಬಂದಿದ್ದ ತಕರಾರು ಅರ್ಜಿಗಳನ್ನು ಆ ಬೋರ್ಡಿನವರೇ ತೀರ್ಮಾನ ಮಾಡಬೇಕೇ ಅಥವಾ ಮಂತ್ರಿಗಳು ತೀರ್ಮಾನಮಾಡುತ್ತಾರೋ?

Mr. SPEAKER.—That does not arise.

Sri Mulka GOVINDA REDDY (Chitaldrug).—Sir, I may be permitted to put question No. 194 on behalf of Janab Imam.

Sri A. BHEEMAPPA NAIK (Molakalmuru).—Written permission of the Member who has given notice of the question is necessary.

Sri Mulka GOVINDA REDDY.—Such permission is not necessary in respect of a question. It is only in respect of a resolution, it may be necessary.

Mr. SPEAKER.—It is not very clear. But the practice seems to be that written authority is necessary, and that is why Sri Vasan had authorised Sri Srinivasa Iyengar to put a previous question But I have no objection to allow this one question to be put by you as a special case.

Sri B. HUTCHE GOWDA (Turuvekere).—Even without written authority the Speaker can allow.

Mr. SPEAKER.—It is always better that such things are in writing.

Delay in convening the Legislative Assembly meeting.

Q.—194. **Sri Mulka GOVINDA REDDY** (Chitaldrug) [on behalf of Janab J. Mohamed Imam (Jagalur)].—

Will the Government be pleased to state:—

the reasons for the delay in convening the meeting of the Legislative Assembly?

A.—**Sri A. G. RAMACHANDRA RAO** (Minister for Law and Education).—

There has been no delay. As contemplated by the Constitution of India, the Legislative Assembly and the Legislative Council were summoned immediately after both the Houses were duly constituted under the provisions of the Constitution.

Sri Mulka GOVINDA REDDY.—General elections to the Legislative Assembly were over by 25th January this year. Is it not?